

ಡಾ.ವಿನೋದ ಛೆಬ್ಬಿ

**ಸಂಬಂಧದಲ್ಲಿ ಅತಿಕ್ರಮಣ ಆದಾಗ ಅಷ್ಟೇ ಅಲ್ಲ, ಸಂಬಂಧದ ಅಪಮೌಲ್ಯ ಆದಾಗಲೂ ವೈಯಕ್ತಿಕವಾಗಿ ಗಾಸಿಯಾಗುತ್ತದೆ.**

# 36: ನಂಬಿಕೆ ದ್ರೋಹ

ಒಬ್ಬರು ಸಂಕಟದಲ್ಲಿದ್ದು ಸಹಾಯದ ಪ್ರತೀಕ್ಷೆಯಲ್ಲಿರುವಾಗ ಸಂಗಾತಿ ಒದಗದಿದ್ದರೆ ಮಾನಸಿಕ ಆಘಾತವಾಗುತ್ತದೆ, ಹಾಗೂ ಅದರಿಂದ ನಂಬಿಕೆಗೆ ದ್ರೋಹ ಬಗೆದಂತಾಗುತ್ತದೆ, ಪರಿಣಾಮವಾಗಿ ಬಾಂಧವ್ಯದ ಬುನಾದಿ ಅಲ್ಲಾಡಿ, ಸಂಬಂಧದೊಳಗಿನ ಅಸುರಕ್ಷಿತೆ ಬಯಲಾಗುತ್ತದೆ ಎಂದು ಕಂಡುಕೊಂಡೆವು.

ನಂಬಿಕೆಗೆ ದ್ರೋಹ ನಡೆಯುವಾಗ ಕೆಲವೊಮ್ಮೆ ಯಾರು ಯಾರಿಗೆ ದ್ರೋಹ ಬಗೆಯುತ್ತಾರೆ ಎಂದು ನಿರ್ಧರಿಸಲಾರದ ಸ್ಥಿತಿ ನಿರ್ಮಾಣವಾಗಲು ಸಾಧ್ಯವಿದೆ. ಸಂಬಂಧದ ವ್ಯಾಖ್ಯೆಯೇ ಬದಲಾಗುವ ಈ ಸ್ಥಿತಿಗೆ ಅಪರೂಪದ ದೃಷ್ಟಾಂತವೊಂದು ಇಲ್ಲಿದೆ.

ಕಾಂತಿಲಾಲ್ ಹಾಗೂ ಕೋಮಲ್ (ಇಲ್ಲಿ ಬರುವ ಹೆಸರುಗಳು ಕೇವಲ ಕಾಲ್ಪನಿಕ) ಅವರ ಮನೆಯಲ್ಲಿ ವ್ಯಾಪಾರೀ ವಾತಾವರಣ. ಕಾಂತಿಲಾಲ್ ಶೇರುಗಳ ವ್ಯವಹಾರ ಮಾಡುತ್ತಾನೆ. ಹಗಲಿರುಳು ಮೂರು ಮೊಬೈಲ್‌ಗಳ ಸಂಪರ್ಕದಲ್ಲಿ ಇರುತ್ತಾನೆ. ಅಷ್ಟೇ ಅಲ್ಲ, ಕಾಮಕೂಟಕ್ಕೆ ಮುನ್ನ ಹಾಗೂ ನಂತರ ಕೂಡ ಅವನು ಮೊಬೈಲ್ ಬಿಟ್ಟಿಲ್ಲ. ಸಮಸ್ಯೆ? ಕೋಮಲ್ ಇನ್ನೊಬ್ಬ ಗಂಡಿಗೆ ಹತ್ತಿರವಾಗುತ್ತಿದ್ದಾಳೆ ಎಂದು ಕೆಂಡಾಮಂಡಲವಾದ ಕಾಂತಿಲಾಲ್ ಅವಳಿಗೆ 'ಬುದ್ಧಿ ಹೇಳಿಸಲು' ಕರೆತಂದಿದ್ದಾನೆ. ಕೋಮಲ್ ನನ್ನೆದುರು ಗಂಡನಿಂದ ದೂರಸರಿದು ಕುಳಿತು, ಅವನು ಮಾತಾಡುವಾಗ ಎಲ್ಲೋ ನೋಡುತ್ತಿದ್ದಾಳೆ. ಬಿಸಿಮಾತಿನ ನಡುವೆ ಅವನು ಅವಳನ್ನು ದೂರುತ್ತಾನೆ: 'ನಾನು ನಿನಗೆ ಏನು ಕಡಿಮೆ ಮಾಡಿದ್ದೆ? ನಿಮ್ಮಪ್ಪನ ಆಸ್ಪತ್ರೆಯ ಬಿಲ್ ನಾನೇ ಕೊಟ್ಟೆ. ನಿನ್ನನ್ನು ಗೆಳತಿಯರೊಡನೆ ಯೂರೋಪ್ ಟ್ರಿಪ್‌ಗೆ ಕಳಿಸಿದೆ. ನಾಲ್ಕು ಬೀರುಗಳ ತುಂಬ ಬಟ್ಟೆಬರೆ, ಕೆಜಿಗಟ್ಟಲೆ ಆಭರಣ ಕೊಡಿಸಿದ್ದೇನೆ. ಇಷ್ಟಾದರೂ ಇನ್ನೊಬ್ಬನ ಸಹವಾಸ ಬಯಸುತ್ತಿದ್ದೀಯಾ?' ಇಷ್ಟೊತ್ತು ಸುಮ್ಮನಿದ್ದ ಕೋಮಲ್ ಗಂಡನನ್ನು ನೇರವಾಗಿ ದೃಷ್ಟಿಸುತ್ತ ಹೇಳುತ್ತಾಳೆ: 'ನನ್ನಪ್ಪನ ಆಸ್ಪತ್ರೆಯ ಬಿಲ್ ಕೊಟ್ಟೆ ಸರಿ, ಆದರೆ ಒಂದು ಸಲವಾದರೂ ಆಸ್ಪತ್ರೆಗೆ ಭೇಟಿ ಕೊಟ್ಟೆಯಾ? ನನ್ನನ್ನು ವಿದೇಶ ಸುತ್ತಲು ಕಳಿಸಿದೆ, ಸರಿ, ಒಂದು ಸಲವಾದರೂ ನನಗೋಸ್ಕರ ನನ್ನೊಡನೆ ಊರು ಬಿಟ್ಟು ಬಂದಿದ್ದೀಯಾ? ರಾಶಿರಾಶಿ ಬಟ್ಟೆಗೆ ಹಣ ಕೊಟ್ಟದ್ದೀಯಾ ಸರಿ, ಒಂದು ಸಲವಾದರೂ ನನ್ನ ಜೊತೆ ಅಂಗಡಿಗೆ ಬಂದಿದ್ದೀಯಾ? ಹಣಕೊಟ್ಟೆ ಎಂದು ಬಡಕೊಳ್ಳುತ್ತೀಯಲ್ಲ, ಯಾವೊತ್ತಾದರೂ ನನ್ನ ಭಾವನೆಗಳೇನು ಎಂದು ಕೇಳಿದ್ದೀಯಾ? ನಿನ್ನ ಭಾವನೆಗಳನ್ನು ನನ್ನೊಡನೆ ಹಂಚಿಕೊಂಡಿದ್ದೀಯಾ? ನನ್ನ ದುಃಖ, ಸಂತಾಪ, ನೋವಿಗೆ ಯಾವೊತ್ತಾದರೂ ಸ್ಪಂದಿಸಿದ್ದೀಯಾ? ಅದೆಲ್ಲ ಬೇಡ, ನೀನೇ ಎಷ್ಟೋ ಸಲ ನನ್ನನ್ನು ಸೇರಬೇಕು ಎಂದಾಗ, ನಾನು ಬಟ್ಟೆಬಿಚ್ಚಿ ತಯಾರಾಗಿರುವಾಗ ನೀನು ಮೊಬೈಲ್‌ನಲ್ಲಿ ಮಾತಾಡುತ್ತ ನನ್ನನ್ನು ಮರೆತೇಬಿಟ್ಟಿದ್ದು ನೆನಪಿದೆಯೆ? ಅದೂ ಬಿಡು, ವರ್ಷಕ್ಕೆ ಮೂರು– ನಾಲ್ಕು ಸಲ ಕೂಡಿದ್ದೇವಲ್ಲ, ಒಂದು ಸಲವಾದರೂ ಸಂಭೋಗದ ಮುಂಚೆ ನನ್ನನ್ನು ಮುದ್ದಾಡಿದ್ದೀಯಾ? ಸಂಭೋಗದ ನಂತರ ಮೊಬೈಲ್ ಬಿಟ್ಟು ನನ್ನನ್ನು ಹಿಡಿದುಕೊಂಡು ಮಲಗಿದ್ದೀಯಾ? ಅದೂ ಬೇಡ, ನಿನ್ನ ಶೇರ್‌ಗಳ ಮೌಲ್ಯ ಹೆಚ್ಚಾದಾಗ ಉತ್ಸಾಹದಿಂದ ಮೊಬೈಲ್‌ಗೆ ಮುತ್ತು ಕೊಟ್ಟಷ್ಟು ನನಗೆ ಮುತ್ತು ಕೊಟ್ಟಿದ್ದೀಯಾ?... ಈಗ ಹೇಳು, ನಾನು ಇನ್ನೊಬ್ಬನ ಸ್ನೇಹ ಬಯಸುವುದರಲ್ಲಿ ತಪ್ಪೇನಿದೆ? ಅವನು ನನ್ನ ಜೊತೆಗೆ ತಾಸುಗಟ್ಟಲೆ ಮಾತಾಡುತ್ತಾನೆ. ನಾನು ಹೇಳುವುದನ್ನು ಆಲಿಸುತ್ತಾನೆ. ನನ್ನೊಂದಿಗೆ ನಗುತ್ತಾನೆ. ನನ್ನ ಜೊತೆಗೆ ಬೀದಿಬೀದಿ ಸುತ್ತುತ್ತಾನೆ.' ಆಗ ಕಾಂತಿಲಾಲ್ ಆಕ್ರೋಶದಿಂದ, 'ತುಮ್ ನೇ ಬಹುತ್ ಬಡೀ ಗಲತೀ ಕೀ ಹೈ! (ನೀನು ಬಹಳ ದೊಡ್ಡ ತಪ್ಪು ಮಾಡುತ್ತಿದ್ದೀಯಾ!)' ಎಂದು ಅರಚಿದಾಗ, ಕೋಮಲ್ ಹೇಳಿದ್ದು ಇನ್ನೂ ನನ್ನ ಕಿವಿಗಳಲ್ಲಿ ಗುಯ್ಗುಡುತ್ತಿದೆ. 'ಗಲತೀ ತೋ ಮೈ ನಹೀಂ, ತುಮನೇ ಕೀ ಹೈ. ಮೈ ಕೇವಲ್ ಉಸ್ ಕೀ ಬುರೀ ಅಸರ್ ಸೇ ಅಪನೇ ಆಪ್ ಕೋ ಬಚಾರಹೀ ಹೂಂ. (ತಪ್ಪು ಮಾಡಿದ್ದು ನಾನಲ್ಲ, ನೀನು. ನಿನ್ನ ತಪ್ಪಿನಿಂದ ನನ್ನ ಮೇಲೆ ದುಷ್ಪರಿಣಾಮ ಆಗದಿರಲಿ ಎಂದು ನನ್ನನ್ನು ನಾನು ರಕ್ಷಿಸಿಕೊಳ್ಳುತ್ತಿದ್ದೇನೆ, ಅಷ್ಟೆ!)'

ಹಾಗೆ ನೋಡಿದರೆ ಯಾರು ಯಾರಿಗೂ ದ್ರೋಹ ಬಗೆದಿಲ್ಲ. ಯಾರೂ ದಾರಿ ತಪ್ಪಿಲ್ಲ. ಇಬ್ಬರೂ ತಮತಮಗೆ ಸುಖಕೊಡುವ ದಾರಿಯನ್ನು ಹುಡುಕಿಕೊಂಡು ಹೋಗಿದ್ದಾರೆ, ಅಷ್ಟೆ.

ಮೇಲಿನ ದೃಷ್ಟಾಂತದಲ್ಲಿ ಇನ್ನೊಂದು ಅಂಶ ಅರಿವಿಗೆ ಬರುತ್ತದೆ. ಸಂಗಾತಿಯು ಘಾಸಿಗೊಳ್ಳುವುದು ಸಂಬಂಧದಲ್ಲಿ ಅತಿಕ್ರಮಣವಾದಾಗ ಅಷ್ಟೇ ಅಲ್ಲ, ಸಂಬಂಧದ ಅಪಮೌಲ್ಯವಾದಾಗಲೂ ಹೀಗಾಗುತ್ತದೆ. ಇದರಿಂದ ಸಂಗಾತಿಯ ಬಗೆಗಿರುವ ಆಶಾದಾಯಕ ಮಾದರಿ ಮುಕ್ಕಾಗುತ್ತದೆ. ಇಂಥ ಪ್ರಸಂಗಗಳಲ್ಲಿ ಒಂದೇ ಪ್ರಶ್ನೆ ಏಳುತ್ತದೆ: ನಾ ನಂಬಿ ಘಾಸಿಗೊಂಡೆ. ನಿನ್ನ ಮೇಲೆ ಹೇಗೆ ಭರವಸೆ ಇಡಲಿ?

ಇಲ್ಲೊಂದು ಸಂದೇಹ: ಒಂದು ನಿರ್ದಿಷ್ಟ ವಿರಸದ ಸಂದರ್ಭದಲ್ಲಿ ಭಿನ್ನ ನಂಟಿನ ನಮೂನೆಯುಳ್ಳ ವ್ಯಕ್ತಿಗಳು ಪ್ರತಿಕ್ರಿಯಿಸುವ ರೀತಿ ಒಂದೇಯೋ, ಅಥವಾ ಭಿನ್ನವಾಗಿಯೋ? ಇದನ್ನು ತಿಳಿದುಕೊಳ್ಳಲು ರಾಜು–ರಾಣಿ ದಂಪತಿಯನ್ನು ತೆಗೆದುಕೊಳ್ಳಿ. ರಾಜು ರಾಣಿಯನ್ನು ಅತಿಪ್ರೀತಿಸಿ ಮದುವೆಯಾಗಿದ್ದಾನೆ, ಹಾಗೂ ಮದುವೆಯ ನಂತರವೂ ಅಷ್ಟೇ ಪ್ರೀತಿಸುತ್ತಾನೆ. ಆದರೆ ತನ್ನ ಅಣ್ಣನೊಡನೆ (ಅಣ್ಣತಮ್ಮಂದಿರು ಒಂದೇ ಮನೆಯಲ್ಲಿದ್ದಾರೆ) ಕುಟುಂಬದ ಆರ್ಥಿಕ ವಿಷಯಗಳ ಕುರಿತು ಚರ್ಚಿಸುವಾಗ ರಾಣಿಯನ್ನು ದೂರವಿಡುತ್ತಾನೆ. ಆಕೆ ಪ್ರಶ್ನಿಸಿದರೆ ಏನೂ ಹೇಳಲು ತೋಚದೆ, ಅದು ನಿನಗೆ ಸಂಬಂಧವಿಲ್ಲ ಎನ್ನುತ್ತಾನೆ. ಕೆದರಿದಾಗ ಗೊತ್ತಾಗಿದ್ದು ಏನೆಂದರೆ, ರಾಣಿಯ ಬಾಯಿಯಲ್ಲಿ ಗುಟ್ಟು ನಿಲ್ಲುವುದಿಲ್ಲ ಎಂಬ ಅನಿಸಿಕೆ ರಾಜುನಲ್ಲಿದೆ (ಇದನ್ನು ಅವನು ತನ್ನಪ್ಪ ಅಮ್ಮನನ್ನು ಉದ್ದೇಶಿಸಿ ಹೇಳಿದ್ದನ್ನು ನೆನಪಿಟ್ಟುಕೊಂಡಿದ್ದಾನೆ. ಹಿರಿಯರ ಮಾದರಿಯನ್ನು ಮಕ್ಕಳು ಹೇಗೆ ಅನುಸರಿಸುತ್ತಾರೆ ಎಂದು ಇನ್ನೊಂದು ಸಲ ನೋಡೋಣ.) ಆದರೆ ರಾಣಿ? ಆಕೆ ಗುಟ್ಟು ಹಂಚಿಕೊಳ್ಳುವುದು ಒತ್ತಟ್ಟಿಗಿರಲಿ, ಇತರರೊಂದಿಗೆ ಮಾತಾಡುವುದೇ ಕಡಿಮೆ! ಹಾಗಾದರೆ ರಾಜೂನ ಭಯ ಎಲ್ಲಿಂದ ಬಂತು? ರಾಜು ಆತಂಕಭಾವದ ನಂಟಿನವನು. ವಿಚಾರದಲ್ಲಿ ತೊಡಗಿದಾಗ ನೇತ್ಯಾತ್ಮಕ ಭಾವಕ್ಕೆ ಒಳಗಾಗಿ ಗೊಂದಲಕ್ಕೆ ಸಿಕ್ಕಿಹಾಕಿಕೊಂಡು ಸಲ್ಲದ ಪರಿಣಾಮಗಳ ಬಗೆಗೆ ಚಿಂತಿತನಾಗುತ್ತಾನೆ. ಆಲೋಚನೆಗೂ ಚಿಂತೆಗೂ ವ್ಯತ್ಯಾಸ ಗೊತ್ತಿಲ್ಲ ಅವನಿಗೆ. ಇಷ್ಟಿದ್ದರೂ ತನ್ನ ಸಂದೇಹವನ್ನು ಸಂಗಾತಿಯ ಮುಂದೆ ಬಿಚ್ಚಿಟ್ಟು ಪರೀಕ್ಷೆಗೊಳಪಡಲು ಸಿದ್ಧನಿಲ್ಲ. ರಾಣಿ ಏಕಾಂಗಿಭಾವದ ನಂಟಿನವಳು. ಆಕೆಗೆ ತವರುಮನೆಯೆಂದರೆ ವ್ಯವಹಾರಕ್ಕೆ ಹತ್ತಿರವೇ ವಿನಾ ಹೃದಯಕ್ಕಲ್ಲ. ರಾಣಿ ರಾಜುವನ್ನು ನಂಬಲು ಯತ್ನಿಸುತ್ತಿದ್ದಾಳೆ. ಆದರೆ ಆತ ತನ್ನ ನಂಬಿಕೆಯನ್ನು ಒಪ್ಪಿಕೊಳ್ಳುತ್ತಾನೆಯೇ ಎಂಬುದು ಆಕೆಗೆ ಇನ್ನೂ ಪ್ರಶ್ನೆಯಾಗಿದೆ. ಗುಟ್ಟನ್ನು ತನ್ನೊಡನೆ ಹಂಚಿಕೊಳ್ಳದ್ದನ್ನು ನೋಡಿ ಆತ ತನ್ನನ್ನು ನಂಬುತ್ತಿಲ್ಲವೆಂದು ನಿರ್ಧರಿಸಿ ದೂರವಿದ್ದಾಳೆ. ಒಂದುವೇಳೆ ರಾಣಿ ಭದ್ರಭಾವದವಳಾಗಿದ್ದರೆ ಏನಾಗುತ್ತಿತ್ತು? ಗಂಡನ ಸ್ವಭಾವವೇ ಹೀಗೆ ಎಂದಂದುಕೊಂಡು ಆಗಾಗ ಆಕ್ಷೇಪಿಸುತ್ತಿದ್ದರೂ ಉಳಿದಂತೆ ಅವನನ್ನು ನಂಬುತ್ತಿದ್ದಳು. ಒಂದುವೇಳೆ ಆತಂಕಭಾವದವಳಾಗಿದ್ದರೆ ಪ್ರತಿಸಲವೂ ಗಂಡನು ಅಣ್ಣನೊಡನೆ ಮಾತಾಡಿದ ನಂತರ ತನ್ನ ಮನಸ್ಸಿಗೆ ಹೇಗೆ ಘಾಸಿಯಾಗುತ್ತಿದೆ ಎಂಬುದನ್ನು ಜಗಳದೊಂದಿಗೆ ಮನದಟ್ಟು ಮಾಡಿಕೊಡುತ್ತಿದ್ದಳು; ನಂತರ ತನ್ನ ನಂಬಿಕೆಗೆ ಅರ್ಹತೆಯ ಬಗೆಗೆ ತಾನೇ ಸಂದೇಹಪಡುತ್ತಿದ್ದಳು. ತನ್ನನ್ನು ನಂಬಲು ಗಂಡನನ್ನು ಒತ್ತಾಯಿಸುತ್ತ, ನಂಬಿದಾಗ ಮತ್ತೆ ಮತ್ತೆ ಖಚಿತಪಡಿಸಿಕೊಳ್ಳುತ್ತಿದ್ದಳು. ಒಂದುವೇಳೆ ಕ್ಷೋಭಾಭಾವದವಳಾಗಿದ್ದರೆ? ಗುಟ್ಟು ಹಂಚಿಕೊಳ್ಳದಿರುವುದರ ಬಗೆಗೆ ಗಂಡನನ್ನು ದೂರೀಕರಿಸಿ, ಹಂಚಿಕೊಂಡಾಗ ನಂಬದೆ ಎಲ್ಲವನ್ನೂ ಹೇಳದಿರುವ ಆರೋಪ ಹೊರಿಸುತ್ತಿದ್ದಳು. ನಾ ನಿನ್ನ ನಂಬಲಾರೆ ಎಂದೂ, ನಿನ್ನನ್ನು ನಂಬಲಿಕ್ಕಾಗದೆ ನನಗೆ ಎಷ್ಟೊಂದು ನೋವಾಗಿದೆ ಎಂದೂ ತೋರಿಸಿಕೊಳ್ಳುತ್ತಿದ್ದ. ಒಟ್ಟಿನಲ್ಲಿ, ಘಾಸಿಯಾಗುವ ಸಂದರ್ಭ ಒಂದೇ ಆಗಿದ್ದರೂ ಅದಕ್ಕೆ ಪ್ರತಿಕ್ರಿಯಿಸುವ ರೀತಿಯು ಅವರವರ ನಂಟಿನ ನಮೂನೆಯನ್ನು ಅನುಸರಿಸಿ ಬೇರೆಬೇರೆಯಾಗಿರುತ್ತದೆ ಎಂಬುದು ಸ್ಪಷ್ಟವಾಗುತ್ತದೆ.

**ದಾಂಪತ್ಯದ ಬಗೆಗೆ ನಿಮ್ಮ ಅನಿಸಿಕೆ, ಸಮಸ್ಯೆಗಳನ್ನು ಸುಖೀ ದಾಂಪತ್ಯ ವಿಭಾಗ, ನಂ. 75, ಎಂ. ಜಿ. ರಸ್ತೆ, ಬೆಂಗಳೂರು 01 ಇಲ್ಲಿಗೆ ಕಳುಹಿಸಿ. ದಾಂಪತ್ಯ ಸಮಸ್ಯೆಗಳಿಗೆ ಉಚಿತ ಸಹಾಯವಾಣಿ 8494944888 ಗೆ ಪ್ರತಿ ಮಂಗಳವಾರ ಹಾಗೂ ಶುಕ್ರವಾರ ಬೆಳಿಗ್ಗೆ 11ರಿಂದ ಸಂಜೆ 5ರ ತನಕ ಕರೆಮಾಡಿ.**
**ಲೇಖಕರ ವಿಳಾಸ: www.medisex.org**